(4) ಶಾಸನ ರಚನೆ

ಕರ್ನಾಟಕ ಎಣ್ಣೆ ತಾಳೆ (ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣದ ವಿನಿಯಮ) ವಿಧೇಯಕ, 2000

ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಅಲ್ಲಂ ವೀರಭದ್ರಪ್ಪ (ಮಾನ್ಯ ತೋಟಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಎಣ್ಣೆ ತಾಳೆ (ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣದ ವಿನಿಯಮ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ತಾಳೆ ಬೆಳೆ ನಮ್ಮ ರಾಜ್ಯದಲ್ಲಿ ಸುಮಾರು 5-6 ವರ್ಷಗಳ ಹಿಂದೆ ಕೇಂದ್ರ ಸರ್ಕಾರದ ಬೋಧಕತ್ವದಿಂದ ಸುಮಾರು 8 ಸಾವಿರ ಎಕರೆಯಲ್ಲಿ ಬೆಳೆಯುತ್ತಿದ್ದೇವೆ. ಕೇಂದ್ರ ಸರ್ಕಾರದ ನಿಲುವು ನಮ್ಮ ದೇಶದಲ್ಲಿ ಎಣ್ಣೆ ಬೆಳೆ, ಎಣ್ಣೆ ಪದಾರ್ಥಗಳು ಬರತಕ್ಕ ಬೆಳೆಗಳನ್ನು ಹೆಚ್ಚಿನ ರೀತಿಯಲ್ಲಿ ಅವಕಾಶ ಕೊಟ್ಟು ಬೆಳೆಸಬೇಕೆಂಬ ಉದ್ದೇಶದಿಂದ ಕರ್ನಾಟಕ ರಾಜ್ಯದಲ್ಲಿ ಈ ಯೋಜನೆಯನ್ನು ತೆಗೆದುಕೊಂಡಿದ್ದೇವೆ. ಎಲ್ಲಾ ತರಹದ ಎಣ್ಣೆ ಬೆಳೆಗಳ ಪೈಕಿ, ತಾಳೆ ಬೆಳೆಯಿಂದ ಆಯಿಲ್ ಎಕ್ಸ್ಪ್ರಾಕ್ಷನ್, ಯೀಲ್ಡ್ ಹೆಚ್ಚಿನದಾಗಿರುವುದರಿಂದ ಇದಕ್ಕೆ ಹೆಚ್ಚಿನ ಮಹತ್ವ ಕೊಟ್ಟು ದೇಶದಲ್ಲಿ ಬೆಳೆಸಬೇಕೆಂಬ ಈ ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ ಹಮ್ಮಿಕೊಂಡಿದೆ. ಆದರೆ, ಈ ಬೆಳೆಯ ಮಹತ್ವ ಏನೆಂದರೆ, ಬೆಳೆ ಬೆಳೆದ ಮೇಲೆ ಹಣ್ಣು ಬಂದ ಸಮಯದಲ್ಲಿ ಅದನ್ನು 24 ಗಂಟೆಯೊಳಗೆ ಕ್ರಷ್ ಮಾಡಬೇಕಾಗುತ್ತದೆ. ಆ ರೀತಿ ಕ್ರಷಿ ಮಾಡಬೇಕೆಂದರೆ, ಈ ಬೆಳೆಗಳನ್ನು ಬೆಳೆಯುವ ಪ್ರಾಂತ್ಯದಲ್ಲಿಯೇ ಒಂದು ಫ್ಯಾಕ್ಟರಿ ಹಾಕಬೇಕು. ಫ್ಯಾಕ್ಟರಿಯವರು ಇದನ್ನು ಕೊಂಡುಕೊಳ್ಳಬೇಕು. ಇದುವರೆಗೂ ಇಂತಹ ಆಕ್ಟ್ ನಮ್ಮ ರಾಜ್ಯದಲ್ಲಿ ಇರಲಿಲ್ಲ. ಹೊರ ರಾಜ್ಯಗಳಾದಂಥ ಆಂಧ್ರ ಮತ್ತು ತಮಿಳುನಾಡಿನಲ್ಲಿ ಇಂತಹ ಆಕ್ಟ್ ಇತ್ತು. ಈ ವಿಧೇಯಕದ ಮೂಲಕ ರೈತರಿಗೆ ಬೆಲೆ ಕೊಟ್ಟು ಫ್ಯಾಕ್ಟರಿಯವರು ಇದನ್ನು ಕೊಂಡುಕೊಳ್ಳುವ ಹಕ್ಕು ಇರುತ್ತದೆ. ಫ್ಯಾಕ್ಟರಿ ಮಾಲೀಕನು ತೆಗೆದುಕೊಳ್ಳುವ ಸಂದರ್ಭದಲ್ಲಿ ಸಮಿತಿ ಮೂಲಕ ಪೆನಾಲ್ಟಿ ಹಾಕುವ ಕ್ಲಾಸ್ ಕೂಡ ಈ ಆಕ್ಟ್‌ನಲ್ಲಿವೆ. ಆದಕಾರಣ ರೈತರ ಹಿತದೃಷ್ಟಿಯಿಂದ ರೈತರಿಗೆ ನಿಗದಿಪಡಿಸಿರತಕ್ಕ ಬೆಲೆ ಸಿಗುವ ದೃಷ್ಟಿಯಿಂದ, ಎಲ್ಲಾ ತರಹದ ಅನುಕೂಲಗಳನ್ನು ಈ ಆಕ್ಟ್‌ನಲ್ಲಿ ತಂದಿದ್ದೇವೆ. ಇವತ್ತು ಫ್ಯಾಕ್ಟರಿಯವರು ತೆಗೆದುಕೊಳ್ಳಬೇಕಾದರೂ ಕೂಡ ಒಂದು ಕಮಿಟಿ ಇರುತ್ತದೆ. ಕಮಿಟಿ ಮೂಲಕ ಅವರು ಅಲ್ಲಿ ಹೋಗಿ ಮಾತನಾಡುವುದಕ್ಕೂ ಅನುಕೂಲ ಇರುತ್ತದೆ. ಇವತ್ತು ಪ್ರಾಕ್ಟಿಕಲ್ ಆಗಿ ಶಿವಮೊಗ್ಗದಲ್ಲಿ ಒಬ್ಬರು ಓಸ್‌ವಾಲ್ ಫ್ಯಾಕ್ಟರಿ ಎಂದು ಹಾಕಿದ್ದಾರೆ. ಆದರೆ, ಯಾವ ತರಹದ ಅಗ್ರಿಮೆಂಟ್ ಇಲ್ಲದಕ್ಕೋಸ್ಕರ ಇವತ್ತು ಸುಮಾರು 40 ಲಕ್ಷ ರೂಪಾಯಿ ರೈತರಿಗೆ ಕೊಡಬೇಕಾಗಿದೆ. ಅವನು ಫ್ಯಾಕ್ಟರಿ ಬಂದ್ ಮಾಡಿಬಿಟ್ಟು ರೈತರಿಗೆ ಬಹಳ ತರದ

ಅನ್ಯಾಯ ಮಾಡಿ ಪಂಜಾಬಿಗೆ ಓಡಿಹೋಗಿದ್ದಾನೆ. ಅವನ ಮೇಲೆ ಯಾವುದೇ ಕಠಿಣ ಶಿಕ್ಷೆ ಕೊಡುವುದಕ್ಕೆ ಬೆಳೆಗಾರರಿಗೆ ಯಾವುದೇ ಒಂದು ಹಕ್ಕು ಇಲ್ಲ ಮತ್ತು ಆ್ಯಕ್ಟ್ ಕೂಡ ಇಲ್ಲ. ರೈತರಿಗೆ ಮುಂದೆ ಇಂತಹ ಅನ್ಯಾಯವಾಗಬಾರದೆಂಬ ದಿಸೆಯಿಂದ ಇವತ್ತು ಈ ವಿಧೇಯಕವನ್ನು ತರುತ್ತಿದ್ದೇವೆ. ಇಂತಹ ವಿಧೇಯಕ ಇದ್ದರೆ ಇದರಿಂದ ಬಹಳಷ್ಟು ಅನುಕೂಲವಿರುತ್ತದೆ. ಮುಂದಕ್ಕೆ ಅನ್ಯಾಯವಾಗದ ಹಾಗೆ ನೋಡಿಕೊಳ್ಳುವುದಕ್ಕೆ, ರೈತರ ಹಿತದೃಷ್ಟಿಯಿಂದ ಈ ಆ್ಯಕ್ಟ್‌ನ್ನು ತರುತ್ತಿದ್ದೇವೆ. ಅತಿ ಮುಖ್ಯವಾಗಿ ಬೆಳೆಗಾರರಿಗೆ ಒಳ್ಳೆಯ ಬೆಲೆ ಸಿಗಬೇಕೆಂಬ ಉದ್ದೇಶದಿಂದ ಮತ್ತು ಯಾವುದೇ ತರದ ಅನ್ಯಾಯವಾಗಬಾರದೆಂಬ ಉದ್ದೇಶದಿಂದ ಈ ವಿಧೇಯಕವನ್ನು ತಂದಿದ್ದೇವೆ. ಆ ಪ್ರಾಂತ್ಯದಲ್ಲಿ ಫ್ಯಾಕ್ಟರಿಯವರು ಇದ್ದರೆ, ಅವರ ಮೂಲಕ ಬಹಳಷ್ಟು ಸಹಾಯವಾಗುತ್ತದೆ. ನಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಬಹಳಷ್ಟು ಸಿಬ್ಬಂದಿ ಇಲ್ಲದೇ ಇರುವುದರಿಂದ, ಫ್ಯಾಕ್ಟರಿಯವರು ಎಲ್ಲಾ ತರದ ಅನುಕೂಲಮಾಡಬೇಕೆಂದು ಕಮಿಟಿಯ ಉದ್ದೇಶ ಕೂಡ ಆಗಿದೆ. ಆ ದೃಷ್ಟಿಯಿಂದ ಈ ಆ್ಯಕ್ಟ್ ಬೇಕಾಗಿದೆ. ಮಾನ್ಯ ಭೈರೇಗೌಡರು ಅಗ್ರಿಕಲ್ಚರ್ ಮಿನಿಸ್ಟರ್ ಆಗಿದ್ದಾಗ, ಇದನ್ನು ಮಾಡಬೇಕೆಂದು ಹೇಳಿದ್ದರು. ಅವರ ಸಚಿವ ಸಂಪುಟದಲ್ಲಿ, ಈ ವಿಚಾರ ಬಂದು, ಹೊರ ರಾಜ್ಯಗಳಿಗೆ ಭೇಟಿ ಕೊಟ್ಟು ಇದರ ಬಗ್ಗೆ ಮಾಹಿತಿಯನ್ನು ತರಿಸಬೇಕೆಂದು ತೀರ್ಮಾನಿಸಿದ ಪ್ರಕಾರ ನಾವು ಎಲ್ಲಾ ರಾಜ್ಯಗಳಿಗೆ ಭೇಟಿ ಕೊಟ್ಟಿದ್ದೇವೆ. ಎಲ್ಲಾ ರಾಜ್ಯಗಳ ಮಾಹಿತಿಯನ್ನು ಸಂಗ್ರಹಿಸಿ, ರೈತರಿಗೆ ಅನುಕೂಲವಾಗತಕ್ಕ ಒಳ್ಳೆಯ ಅಂಶಗಳನ್ನು ಇದರಲ್ಲಿ ತಂದಿದ್ದೇವೆ. ಆದಕಾರಣ, ಈ ವಿಧೇಯಕವನ್ನು ಒಪ್ಪುವುದರಿಂದ ರೈತರಿಗೆ ಬಹಳಷ್ಟು ಒಳ್ಳೆಯದಾಗುತ್ತದೆಂದು ನಾನು ಈ ಮೂಲಕ ತಿಳಿಸುತ್ತಿದ್ದೇನೆ.

+ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಇವತ್ತು ಕರ್ನಾಟಕ ಎಣ್ಣೆ ತಾಳೆ (ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣ ವಿನಿಯಮ) ವಿಧೇಯಕ - 2000 ಇದನ್ನು ಮಾನ್ಯ ಮಂತ್ರಿಗಳು ಮಂಡಿಸಿದ್ದಾರೆ. ಅವರ ಪ್ರಾಸ್ತಾವಿಕ ಭಾಷಣದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಸರ್ಕಾರ ಇದ್ದಂಥ ಕಾಲದಲ್ಲಿ ಈ ವಿಧೇಯಕವನ್ನು ತಯಾರು ಮಾಡಿ, ವಿವರವಾಗಿ ಪರಿಶೀಲನೆಯನ್ನು ನಡೆಸಿದ್ದೆವು. ಆಗ ನಮಗೆ ಒಂದು ಅನುಮಾನ ಏನು ಬಂದಿತ್ತು ಎಂದರೆ ಇವತ್ತು ಪ್ರಪಂಚದಾದ್ಯಂತ ಮತ್ತು ನಮ್ಮದೇಶದಲ್ಲಿ ಈ ಉದಾರೀಕರಣ ಎಂಬ ಗಾಳಿ ಬಹಳ ವೇಗವಾಗಿ ಬೀಸುತ್ತಾ ಇದೆ. ಇಂತಹ ಗಾಳಿ ಬೀಸುತ್ತಿರತಕ್ಕ ಸಂದರ್ಭದಲ್ಲಿ ಮತ್ತೆ ವಿಶ್ವವಾಣಿಜ್ಯ ವ್ಯವಹಾರದ (ಡಬ್ಲ್ಯು. ಟಿ. ಓ.) ಇವೆಲ್ಲವೂ ಜಾರಿಗೆ ಬಂದಮೇಲೆ ಏನೇನು ಅಡೆತಡೆಗಳು ಇದ್ದವು, ಅವುಗಳನ್ನು ತೆಗೆದು ಹಾಕಬೇಕೆಂಬುದು ಇವತ್ತು ದೇಶದ ಮುಂದೆ ಇರತಕ್ಕ ಪ್ರಶ್ನೆ. ಅದು ಪ್ರಪಂಚದಲ್ಲೂ ಕೂಡ ಬಹಳ ವಿಸ್ತಾರವಾಗಿ ಚರ್ಚೆಯಾಗುತ್ತಾ ಇದೆ. ನಮ್ಮದೇಶವೂ ಸಹ ಈ ವಿಶ್ವವಾಣಿಜ್ಯ ವ್ಯವಸ್ಥೆಯ ಅಂಗವಾಗಿ ಕೆಲಸ ಮಾಡುತ್ತಿರತಕ್ಕಂತಾದ್ದು ಗೊತ್ತಿರತಕ್ಕ ವಿಚಾರ. ಇಂತಹ ಸಂದರ್ಭದಲ್ಲಿ ನಾವು, ಅದರಲ್ಲಿಯೂ ಸಹ ಕೃಷಿಯಲ್ಲಿರತಕ್ಕ ಈ ವ್ಯವಸ್ಥೆಗೆ ಕೆಲವು ಅಡೆತಡೆಗಳನ್ನು ಹಾಕಿದರೆ ಏನಾಗಬಹುದು ಎನ್ನತಕ್ಕ ಒಂದು ಸಣ್ಣ ಅನುಮಾನ ನಮಗೆ ಬಂದ ಕಾರಣದಿಂದ ಮತ್ತೆ ಇದು ನಮ್ಮ ರಾಜ್ಯದಲ್ಲೇ ಅಲ್ಲದೆ ಪಕ್ಕದ ರಾಜ್ಯದಲ್ಲೂ ಈ ಬೆಳೆ ಇದೆ. ತಮಿಳುನಾಡಿನಲ್ಲೂ ಈ ಬೆಳೆ ಬೆಳೆಯುತ್ತಿದ್ದಾರೆ ಜೊತೆಗೆ ಆಂಧ್ರಪ್ರದೇಶದಂಥ ವಿಸ್ತಾರವಾದ ಪ್ರದೇಶದಲ್ಲೂ ಸಹ ಈ ಬೆಳೆ ಬೆಳೆಯುತ್ತಿದ್ದಾರೆ.

12.50 ಪಿ. ಎಂ

ಇದನ್ನು ನೋಡಿಕೊಂಡು ಬಂದು, ಅವರ ಅನುಭವ ಯಾವ ರೀತಿ ಇದೆ, ಈ ರೀತಿಯಾದ ಕಾನೂನನ್ನು ಅಲ್ಲಿಯೂ ಸಹ ಜಾರಿಗೆ ತಂದಿದ್ದಾರೆ. ಅವರುಗಳ ಅನುಭವವನ್ನು ತಿಳಿದುಕೊಂಡು ಮುಂದಿನ ಹೆಜ್ಜೆಯನ್ನು ಇಡುವುದು ಸೂಕ್ತವೆಂಬ ಕಾರಣದಿಂದ ನಾವು ಅದನ್ನು ವಿಧಾನಸಭೆಯಲ್ಲಿ ಮಂಡನೆ ಮಾಡತಕ್ಕ ಪ್ರಯತ್ನ ಮಾಡಲಿಲ್ಲ. ಆ ಹಂತದಲ್ಲಿ ಅದು ಇತ್ತು. ಈಗ ಮಾನ್ಯ ಸಚಿವರು ಈ ಮಸೂದೆಯನ್ನು ತಂದಿದ್ದಾರೆ. ಈ ವಿಧೇಯಕವನ್ನು ಸಧ್ಯಕ್ಕೆ ತಾತ್ವಿಕವಾಗಿ ನಾವು ಸ್ವಾಗತಿಸುತ್ತೇವೆ. ನಮ್ಮ ರಾಜ್ಯದಲ್ಲಿ ಕೆಲವು ದೊಡ್ಡ ದೊಡ್ಡ ಕಂಪನಿಗಳು ಇದರ ವ್ಯವಹಾರದಲ್ಲಿ ತೊಡಗಿದೆ. ಎಲ್ಲಿ ನೋಡಿದರೂ ಸಹ ಅದು ಮೈಸೂರು, ಮಂಡ್ಯ, ಬಳ್ಳಾರಿ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳು ಇರಬಹುದು, ಈ ರೀತಿ ಅನೇಕ ಕಡೆಗಳಲ್ಲಿ ತಾಳೆ ಬೆಳೆ ಬಂಗಾರದ ಬೆಳೆ ಎನ್ನತಕ್ಕಂಥ ಗೋಡೆ ಬರಹಗಳನ್ನು ನಾವು ನೋಡುತ್ತಿದ್ದೇವೆ. ಆ ರೀತಿ ತಾಳೆ ಬೆಳೆಯನ್ನು ಬೆಳೆಯಬೇಕೆಂದು ಪ್ರಚಾರ ಮಾಡಿ, ರೈತರು ಏನೋ ಸ್ವಲ್ಪ ಹಣ ಬರುತ್ತದೆ ಎಂದು ಬಹಳ ಆಸೆಯಿಂದ ಈ ಬೆಳೆಯನ್ನು ಬೆಳೆದರು. ಅನೇಕ ಕಡೆ ಆ ಆಸೆ ನಿರಾಸೆಯಾಯಿತು. ನೂರಾರು ಎಕರೆಯಲ್ಲಿ ಈ ಬೆಳೆಯನ್ನು ಬೆಳೆದಿದ್ದರು, ಕೆಲವು ಕಡೆಗಳಲ್ಲಿ ಹಣ್ಣಿನ ಗೊಂಚಲು ಬಿಟ್ಟಿತ್ತು. ಇದೆಲ್ಲವನ್ನು ಕಡಿದು ಮುಖ್ಯವಾಗಿ ಅಡಿಕೆ ಬೆಳೆಯನ್ನು ಬೆಳೆಯಲು ರೈತರುಗಳು ಬದಲಾವಣೆ ಮಾಡಿಕೊಂಡಿರುವುದು ಸಹ ನನ್ನ ಅನುಭವಕ್ಕೆ ಬಂದಿದೆ. ಈ ಬೆಳೆ ಬೆಳೆಯಲು ಉತ್ತೇಜನ ಕೊಡಲು ಮುಖ್ಯವಾದ ಕಾರಣವೇನೆಂದರೆ, ನಮ್ಮ ದೇಶ ಹತ್ತಾರು ವರ್ಷಗಳಿಂದ ಖಾದ್ಯತೈಲದ ಕೊರತೆಯನ್ನು ಅನುಭವಿಸುತ್ತಿದೆ. ಆ ಕೊರತೆಯನ್ನು ನೀಗಿಸಬೇಕು ಎಂಬ ಉದ್ದೇಶದಿಂದ ರಾಷ್ಟ್ರವ್ಯಾಪ್ತಿಯಾದ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದವರು ಹಾಕಿದರು. ಟೆಕ್ನಾಲಜಿ ಮಿಷನ್ ಫಾರ್ ಆಯಿಲ್ ಸೀಡ್ ಪ್ರೊಡಕ್ಷನ್ ಎಂದು ಆ ಕಾರ್ಯಕ್ರಮವನ್ನು ಹಾಕಿಕೊಂಡರು. ಅದರಲ್ಲಿ ಎಣ್ಣೆ ಕಾಳುಗಳನ್ನು ಬೆಳೆಯತಕ್ಕ ರೈತರಿಗೆ ಉತ್ತೇಜನ ಕೊಡತಕ್ಕದ್ದು, ಹೊಸ ಹೊಸ ತಳಿಯ ಬೀಜಗಳನ್ನು, ಸಸಿಗಳನ್ನು ರೈತರಿಗೆ ಕೊಡತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರು. ಅದರಿಂದ ಈ ಮೊದಲು ಏನು ಎಣ್ಣೆ ಕಾಳುಗಳು ಉತ್ಪಾದನೆಯಾಗುತ್ತಿತ್ತು ಅದಕ್ಕಿಂತ ಹೆಚ್ಚಾಗಿ ಮತ್ತು ವೇಗವಾಗಿ ಎಣ್ಣೆ ಬೀಜಗಳನ್ನು ಉತ್ಪಾದನೆ ಮಾಡುವ ಕೆಲಸವನ್ನು ರೈತರು ಮಾಡಿದರು. ಈ ಕಾರ್ಯಕ್ರಮದಲ್ಲಿ ತಾಳೆ ಬೆಳೆಯುವುದು ಸಹ ಒಂದು. ಇದು ನಮ್ಮ ದೇಶಕ್ಕೆ ಹೊಸದಾದ ಬೆಳೆ. ಆದ್ದರಿಂದ ನಮ್ಮ ದೇಶಕ್ಕೆ ಈ ಬೆಳೆಯನ್ನು ಒಗ್ಗಿಸುವ ಪ್ರಯತ್ನವನ್ನು ಸಹ ಮಾಡಿದರು. ಹೊರದೇಶಗಳಿಂದ ಅದರಲ್ಲೂ ಮಲೇಷಿಯಾ, ಮೆಕ್ಸಿಕೋದಿಂದ ಇದರ ಸಸಿಗಳನ್ನು ತರುವ ಕೆಲಸವನ್ನು ಮಾಡಿ ದೊಡ್ಡ ದೊಡ್ಡ ಸರ್ಸರಿಗಳನ್ನು ಮಾಡಿ ಅದರ ಮೂಲಕ ರೈತರಿಗೆ ಸಸಿಗಳನ್ನು ಒದಗಿಸುವ ಕೆಲಸವಾಯಿತು. ಆದರೆ ಇದಕ್ಕೆ ಸಂಬಂಧಪಟ್ಟಂತೆ ಕೆಲವು ಉದ್ದಿಮೆದಾರರುಗಳೇನು ಉದ್ದಿಮೆಗಳನ್ನು ಸ್ಥಾಪನೆ ಮಾಡಿದರು ಅದನ್ನು ವ್ಯವಸ್ಥಿತವಾಗಿ ನಡೆಸಲಿಲ್ಲ. ಈ ತಾಳೆ ಬೆಳೆ ಬೆಳೆಯುವ ಉದ್ದಿಮೆಯನ್ನು ಸ್ಥಾಪನೆ ಮಾಡಿದಂಥವರಿಗೂ ಸಹ ಕೇಂದ್ರ ಮತ್ತು ರಾಜ್ಯ ಸರ್ಕಾರದ ಹೇರಳವಾದ ಸಬ್ಸಿಡಿ ಇದೆ. ಇದರ ಮೇಲೆ ಕಣ್ಣಿಟ್ಟು ಕೆಲವರು ಮಾತ್ರ ಉದ್ದಿಮೆಗಳನ್ನು ಪ್ರಾರಂಭ ಮಾಡಿದರು. ಶಿವಮೊಗ್ಗದಲ್ಲಿ ತಾಳೆ ಬೆಳೆಯನ್ನು ದೊಡ್ಡ ಪ್ರಮಾಣದಲ್ಲಿ ಬೆಳೆದರು. ಆದರೆ ಅಲ್ಲಿ ಹಾಕಿದ್ದಂಥ ಯಂತ್ರಗಳ ಸಾಮರ್ಥ್ಯವೇನಿತ್ತು ಅದರಿಂದ ಅಲ್ಲಿ ಬೆಳೆದಿದ್ದ ಬೆಳೆಯನ್ನು

ಪೂರ್ತಿಯಾಗಿ ಪ್ರೋಸೆಸ್ ಮಾಡಲು ಆಗುತ್ತಿರಲಿಲ್ಲ. ಆ ಸಾಮರ್ಥ್ಯವೆ ಆ ಕಾರ್ಖಾನೆಗೆ ಇರಲಿಲ್ಲ. ಆದ್ದರಿಂದ ಕಾರ್ಖಾನೆಯವರಿಗೆ ಸಹ ಲಾಭದಾಯಕವಾಗಿ ಕೆಲಸ ಮಾಡಲು ಸಾಧ್ಯವಾಗಲಿಲ್ಲ. ಅದರಿಂದ ನಷ್ಟವೂ ಆಯಿತು. ಆದರೆ ಅವರು ಸಬ್ಸಿಡಿಯನ್ನು ಪಡೆದುಕೊಂಡರು, ಆದರೆ ರೈತರಿಗೆ ಮಾತ್ರ ಇದರಿಂದ ಪೂರ್ತಿಯಾದ ಪ್ರತಿಫಲ ದೊರಕುವ ಕೆಲಸವಾಗಲಿಲ್ಲ. ನಾನು ಸಚಿವನಾಗಿದ್ದಾಗ ಸಹ ಈ ವಿಚಾರ ಪ್ರಸ್ತಾಪಕ್ಕೆ ಬಂದಿತ್ತು. ನಾವು ಅವರನ್ನು ಕರೆಸಿ ಮಾತನಾಡಿದಾಗ ಅವರು ಕೆಲವು ಕುಂಟು ನೆಪಗಳನ್ನು ಹೇಳಿದರು. ಕುಂಟುನೆಪವನ್ನು ಹೇಳಲು ಇದು ಕಾಲವಲ್ಲ, ಲಕ್ಷಾಂತರ ರೈತರು ಇದರ ಮೇಲೆ ಅವಲಂಬಿಸಿದ್ದಾರೆ, ರೈತರುಗಳ ಆಗುಹೋಗುಗಳು ಇದರಲ್ಲಿ ಅಡಗಿರುವುದರಿಂದ ತಾವು ಆ ರೀತಿ ಹೇಳಬಾರದೆಂದು ಹೇಳಿಕಳಿಸಿದೆ. ಆದರೆ ಆ ವರ್ಷ ಬೆಳೆದಿದ್ದಂಥ ತಾಳೆ ಹಣ್ಣನ್ನು ಅವರು ಪ್ರೋಸೆಸ್ ಮಾಡಲಿಲ್ಲ. ಆ ಹಣ್ಣನ್ನು ಆಂಧ್ರ ಮತ್ತು ಬೇರೆ ಕಡೆಗಳಿಗೆ ಕಳಿಸಿ ಇದ್ದದ್ದರಲ್ಲಿ ತಾತ್ಕಾಲಿಕವಾದ ಪರಿಹಾರವನ್ನು ರೈತರಿಗೆ ಕೊಡಿಸುವ ಪ್ರಯತ್ನವಾಯಿತು. ಆದರೆ ಆ ಪರಿಹಾರ ತಾತ್ಕಾಲಿಕವಾದ ಪರಿಹಾರವಾಯಿತೇ ವಿನಹ ಶಾಶ್ವತವಾದ ಪರಿಹಾರ ಲಭ್ಯವಾಗಲಿಲ್ಲ. ಈ ಸಮಸ್ಯೆ ಬಗೆಹರಿಯಲಿಲ್ಲ. ಅಂಥ ಸಂದರ್ಭದಲ್ಲಿ ಈ ಮಸೂದೆಯನ್ನು ತ್ವರಿತವಾಗಿ ತರಬೇಕೆಂದು ನಾವು ಆಲೋಚನೆಯನ್ನು ಮಾಡಿದ್ದೆವು. ಈ ಮಸೂದೆಯಿಂದ ರೈತರಿಗೆ ಸ್ವಲ್ಪಮಟ್ಟಿಗೆ ರಕ್ಷಣೆ ಸಿಗುತ್ತದೆ. ಪೂರ್ತಿಯಾದ ರಕ್ಷಣೆ ರೈತರಿಗೆ ಇದರಿಂದ ಸಿಗುತ್ತದೆ ಎಂಬುದು ನನ್ನ ನಂಬಿಕೆಯಾಗಿಲ್ಲ. ಮತ್ತು ಇದು ಹೊಸದಾಗಿ ಆಗಿರತಕ್ಕದ್ದು, ಮತ್ತು ಹೊಸ ಬೆಳೆ. ಈ ಮಸೂದೆ ಸಹ ಹೊಸದು. ಈ ಬೆಳೆಯನ್ನು ಬೆಳೆದಂತ ಅನುಭವ ನಮಗಂತೂ ಇಲ್ಲ. ಮಲೇಷಿಯಾದಲ್ಲಿ ಇದೇ ಒಂದು ದೊಡ್ಡ ಉದ್ದಿಮೆಯಾಗಿ ಬೆಳೆದಿದೆ. ಇಂಡೋನೇಷಿಯಾದಲ್ಲೂ ಸಹ ಬೆಳೆದಿದೆ. ಇಲ್ಲಿ ದೊಡ್ಡ ದೊಡ್ಡ ಕಂಪನಿಗಳು ಲಕ್ಷಾಂತರ ಎಕರೆ ಪ್ರದೇಶದಲ್ಲಿ ತಾಳೆ ಬೆಳೆಯನ್ನು ಬೆಳೆಸಿ ಅದರಿಂದ ಎಣ್ಣೆ ಮಾಡಿ ಆ ಎಣ್ಣೆಯನ್ನು ಬೇರೆ ದೇಶಕ್ಕೆ ಕಳಿಸುತ್ತಿದ್ದಾರೆ. ಇವತ್ತು ಇಂಡೋನೇಷಿಯಾ ಮತ್ತು ಮಲೇಷಿಯಾದ ಮಧ್ಯೆ ಯಾರು ಹೆಚ್ಚಿಗೆ ಬೆಳೆಯಬೇಕು, ಯಾರು ಯಾವ್ಯಾವ ದೇಶದಲ್ಲಿ ಮಾರಾಟ ಮಾಡಬೇಕು ಯಾವ ಬೆಲೆಗೆ ಮಾರಾಟ ಮಾಡಬೇಕು, ಸರಕನ್ನು ಹೆಚ್ಚಿಗೆ ಮಾರಾಟ ಮಾಡಬೇಕಾಗಿದ್ದರೆ ಯಾವ ಬೆಲೆಗೆ ಮಾರಾಟ ಮಾಡಬೇಕು ಎಂಬ ಸ್ಪರ್ಧೆ ನಡೆಯುತ್ತಿದೆ. ನಮ್ಮ ದೇಶದಲ್ಲಿ ಖಾದ್ಯತೈಲದಲ್ಲಿ ಸ್ವಾವಲಂಬನೆ ಸಾಧಿಸಬೇಕಾದ ದೃಷ್ಟಿಯಿಂದ ಇದನ್ನು ಮಾಡಿರತಕ್ಕದ್ದು. ಆದರೆ ಇದು ಏನಾಗುತ್ತಿದೆ ಎಂದರೆ, ದೊಡ್ಡ ಪ್ರಮಾಣದಲ್ಲಿ, ದೊಡ್ಡ ಉದ್ದೇಶದಿಂದ ಈ ಎಣ್ಣೆಯನ್ನು ನಮ್ಮ ದೇಶದಲ್ಲಿ ಉತ್ಪಾದನೆ ಮಾಡಬೇಕು ಎಂಬ ಪ್ರಯತ್ನಕ್ಕೆ ತಣ್ಣೀರನ್ನು ಎರಚುವ ಪ್ರಯತ್ನ ಸಹ ಆಗುತ್ತದೆ. ಯಾವ ರೀತಿಯಲ್ಲಿ ಎಂದರೆ, ಇವತ್ತು ಹೊರ ದೇಶದಿಂದ ತಾಳೆ ಎಣ್ಣೆ ನಮಗೇನು ಅವಶ್ಯಕತೆ ಇದೆ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ತರಿಸುತ್ತಿದ್ದಾರೆ. ಆದ್ದರಿಂದ ಕಡ್ಲೇಕಾಯಿ, ಎಳ್ಳು, ಕುಸುಬೆ ಬೆಳೆಯತಕ್ಕವರಿಗೆ, ತಾಳೆ ಎಣ್ಣೆ ಅಲ್ಲದೆ ಬೇರೆ ಕಾಳುಗಳನ್ನು ಬೆಳೆಯುತ್ತಿರುವ ರೈತರಿಗೆ ಲಾಭದಾಯಕವಾದ ಬೆಲೆ ಸಿಗುತ್ತಿಲ್ಲ. ಇವತ್ತು ನಮಗೆ ಎಷ್ಟು ಭಯವಾಗುತ್ತಿದೆ ಎಂದರೆ, ಹೋದ ವರ್ಷ ಕಡ್ಲೆಕಾಯಿ ಬೆಳೆಗೆ ರೋಗ ಬಂತು, ಮಳೆಯ ವೈಫಲ್ಯದಿಂದ ಬೆಳೆ ಪೂರ್ತಿಯಾಗಿ ರೈತರಿಗೆ ಬರಲಿಲ್ಲ. ಆದ್ದರಿಂದ ಇವತ್ತು ಬೀಜದ ಕೊರತೆ ಎದ್ದು ಕಾಣುತ್ತಿದೆ. ಹವಾಮಾನದ ವೈಫಲ್ಯ ಒಂದು ಕಡೆಯಾದರೆ ಸರ್ಕಾರದ ನೀತಿಗಳು ಒಂದು ಕಡೆಯಾಗಿದೆ. ಈ ಸಂದರ್ಭದಲ್ಲಿ

ರೂಢಿಯಲ್ಲಿರುವ ಒಂದು ಮಾತು ಏನೆಂದರೆ Indian agriculture is gambling in mansoon. ಇದು ನೂರಾರು ವರ್ಷಗಳಿಂದ ಬಂದಿದೆ. ಅದರ ಜೊತೆಗೆ ಈಗ ಏನಾಗುತ್ತಿದೆ ಎಂದರೆ, ನಮ್ಮ ರೈತರ ದುರಾದೃಷ್ಟವೇನಾಗಿದೆಯೆಂದರೆ the Indian farmer is not only gambling with mansoon, but he is gambling with the Government also. He is gambling with Government also. Which are those Government? Our own Governments. ನಮ್ಮ ಸರ್ಕಾರಗಳೆ ರೈತರ ತಲೆ ಮೇಲೆ ಬಂಡೆಯನ್ನು ಎಳೆಯುವ ಕೆಲಸ ಮಾಡುತ್ತಿದೆ. ಯಾವ ಕಾರಣಕ್ಕೂ ಸಹ ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹೊರ ದೇಶದಿಂದ ಎಣ್ಣೆಯನ್ನು ತರಿಸಬೇಕಾಗಿಲ್ಲ. ಆದರೂ ಸಹ ಇವತ್ತಿನ ದಿವಸ ತರಿಸುತ್ತಿದ್ದಾರೆ. ದೆಹಲಿಗೆ ಹೋಗಿ ಯಾರು ಯಾರ ಕೈಯನ್ನು ಬೆಚ್ಚಗೆ ಮಾಡುತ್ತಾರೊ ಅವರ ಮಾತು ನಡೆಯುತ್ತದೆ. ಈ ದೇಶದ ರೈತರು ಯಾರ ಕೈಯನ್ನು ಸಹ ಬೆಚ್ಚಗೆ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಆದರೆ ಈ ಉತ್ಪನ್ನಗಳನ್ನು ಯಾರು ವ್ಯವಹಾರ ನಡೆಸುತ್ತಾರೆ, ಯಾರು ಇದರ ವ್ಯಾಪಾರವನ್ನು ಮಾಡುತ್ತಾರೆ, ಅವರುಗಳದ್ದು ನಡೆಯುತ್ತದೆಯೇ ವಿನಹ ಈ ದೇಶದಲ್ಲಿ ರೈತರ ಮಾತುಗಳು ನಡೆಯುವುದಿಲ್ಲ. ಆ ಕಾರಣದಿಂದ ಇವೊತ್ತು ಯಾವ ಸರಕಾರವೇ ಅಧಿಕಾರದಲ್ಲಿ ಇರಲಿ ನಾನು ರೈತನಾಗಿ ಒಂದು ಮಾತನ್ನು ಹೇಳಬೇಕಾಗುತ್ತದೆ. ನನಗೆ ಈ ದೇಶದ ರೈತರ ಹಿತವೇ ದೊಡ್ಡದು ವಿನಹ ಸರಕಾರಗಳ ಹಿತ ದೊಡ್ಡದಲ್ಲ. ನಾನು ಈ ಮಾತುಗಳನ್ನು ಬಹಳ ನೊಂದು ಹೇಳುತ್ತಿದ್ದೇನೆ. ನನ್ನ ಹತ್ತಿರ ಒಂದು ದೊಡ್ಡ ಪಟ್ಟಿ ಇದೆ. ಇದರ ಬಗ್ಗೆ ಬೇರೊಂದು ಸಂದರ್ಭದಲ್ಲಿ ವಿಶೇಷವಾಗಿ ಪ್ರಸ್ತಾಪ ಮಾಡುತ್ತೇನೆ. ಈ ದೇಶಕ್ಕೆ ಹೊರದೇಶಗಳಿಂದ ಯಾವ್ಯಾವ ಕೃಷಿ ಉತ್ಪನ್ನಗಳು ಬರುತ್ತಾ ಇವೆ ಎಂಬ ಬಗ್ಗೆ ಪಟ್ಟಿ ಇದೆ. ಸುಮಾರು 1200 ರಷ್ಟು ಕೃಷಿ ಉತ್ಪನ್ನಗಳನ್ನು ಹೊರದೇಶಗಳಿಂದ ನಮ್ಮಲ್ಲಿಗೆ ತರಿಸಿಕೊಳ್ಳಲು ನಮ್ಮವರು ಪರವಾನಿಗೆ ಕೊಟ್ಟಿದ್ದಾರೆ ಮತ್ತು ಅವುಗಳನ್ನು ಪಡೆದುಕೊಳ್ಳಲು ತಯಾರಾಗಿದ್ದಾರೆ. ಅದಕ್ಕಾಗಿ ಮುಕ್ತವಾದಂಥ ಅವಕಾಶವನ್ನು ಕೊಟ್ಟಿದ್ದಾರೆ. ಇದರಿಂದಾಗಿ ದೇಶದ ರೈತರ ತಲೆಯ ಮೇಲೆ ಬಂಡೆ ಎಳೆಯುವಂಥ ಪ್ರಯತ್ನಗಳನ್ನು ನಡೆಸುತ್ತಾ ಇದ್ದಾರೆ. ಇವೊತ್ತು ತಂದಿರುವ ಮಸೂದೆಯಿಂದ ನಮ್ಮ ರೈತರಿಗೆ ಏನಾದರೂ ಸ್ವಲ್ಪಮಟ್ಟಿಗಾದರೂ ರಕ್ಷಣೆ ಸಿಗಬಹುದೆಂಬ ಆಶೆಯಿಂದ ನಾನು ಈ ಮಸೂದೆಯನ್ನು ಸ್ವಾಗತಿಸುತ್ತಾ ಇದ್ದೇನೆ. ರೈತರಿಗೆ ಕಿಂಚಿತ್ ಆದರೂ ರಕ್ಷಣೆ ನಮ್ಮ ಸರಕಾರಗಳಿಂದ ಸಿಗಬೇಕಾಗುತ್ತದೆ. ಚೇಂಜ್ ವೆದರ್ ಮತ್ತು ಮಾನ್‌ಸೂನ್‌ಗಳಿಂದ ರೈತರಿಗೆ ಯಾವ ಸರಕಾರಗಳಿಂದಲೂ ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲ. ಆದರೆ ಸರಕಾರಗಳಿಂದ ಮತ್ತು ವ್ಯಾಪಾರಿಗಳಿಂದ ರೈತರಿಗೆ ರಕ್ಷಣೆ ಸಿಗಬೇಕಾದಂಥ ಪರಿಸ್ಥಿತಿಯು ಈ ಕಾನೂನನ್ನು ಜಾರಿಗೆ ತಂದಾಗ ಆದರೆ ನನಗಂತೂ ತುಂಬಾ ಸಂತೋಷ ಉಂಟಾಗುತ್ತದೆ. ಈ ಕಾರಣಕ್ಕಾಗಿ ಮಸೂದೆಯನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ಅನುಭವದಿಂದ ಮುಂದೆ ಏನಾಗುತ್ತದೆ ಎಂಬುದನ್ನು ನೋಡೋಣ. ಇದರಿಂದ ರೈತರಿಗೆ ರಕ್ಷಣೆ ಸಿಕ್ಕಿದರೆ ನಮಗೆ ಸಂತೋಷವಾಗುತ್ತದೆ. ಒಂದು ವೇಳೆ ಅಂಥ ರಕ್ಷಣೆ ಸಿಗದಿದ್ದರೆ ಮತ್ತು ಈ ಕಾನೂನಿನಲ್ಲಿಯೂ ರೈತರ ತಲೆಯ ಮೇಲೆ ಬಂಡೆ ಎಳೆಯತಕ್ಕಂಥಾದ್ದು ಇದ್ದರೆ ಅದನ್ನು ತೆಗೆಯಬೇಕಾಗುತ್ತದೆ. ಅಂತೆಯೇ ಪಾಸ್ವಾಲ್ ಕಂಪನಿಯನ್ನು ಇಲ್ಲಿಂದ ತೆಗೆದು ಪಂಜಾಬ್‌ಗೆ ಹಾಕಿದರು ಎಂದು ಮಾನ್ಯ ಮಂತ್ರಿಗಳು ಹೇಳುತ್ತಾ ಇದ್ದರು. ರಾಜ್ಯ ಮತ್ತು ಕೇಂದ್ರ ಸರಕಾರಗಳ ಸಬ್ಸಿಡಿ ಹಣವನ್ನು

ಪಡೆದುಕೊಳ್ಳಲು ಬರುವಂಥ ಇಂಥ ಕಂಪನಿಗಳಿಂದಲೂ ನಮ್ಮ ರೈತರಿಗೆ ರಕ್ಷಣೆ ಬೇಕಾಗುತ್ತದೆ. ಇಂಥ ಕಂಪನಿಗಳು ಸಬ್ಸಿಡಿಗೋಸ್ಕರವಾಗಿ ಬರುತ್ತಿವೆ. ಅವುಗಳ ಬಗ್ಗೆ ಜಾಗೃತರಾಗಿರಬೇಕು. ಈ ಎಲ್ಲಾ ಅಂಶಗಳಿಂದ ಸರಕಾರದವರು ರೈತರಿಗೆ ಯಾವ ರೀತಿಯಲ್ಲಿ ರಕ್ಷಣೆ ಕೊಡುತ್ತಾರೆ ಎಂಬುದನ್ನು ನಾನು ಸರಕಾರದಲ್ಲಿ ಕೇಳಬಯಸುತ್ತೇನೆ. ಈ ಮಸೂದೆಯಿಂದ ರೈತರ ರಕ್ಷಣೆಯ ಕುರಿತಾಗಿ ಕಿಂಚಿತ್ ಆದರೂ ಆಸೆಯನ್ನು ನಾವುಗಳು ಇಟ್ಟುಕೊಂಡಿದ್ದೇವೆ. ಆ ಉದ್ದೇಶದಿಂದ ಮಸೂದೆಯನ್ನು ಸ್ವಾಗತಿಸಬಯಸುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟ ತಮ್ಮನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಎಣ್ಣೆ ತಾಳೆ ವಿಧೇಯಕ 2000ವು ರಾಜ್ಯದ ರೈತರ ಹಿತದೃಷ್ಟಿಯಿಂದ ತುಂಬಾ ಅನುಕೂಲಕರವಾದಂಥಾದ್ದು ಆಗಿದೆ. ಅನೇಕ ಜಿಲ್ಲೆಗಳಲ್ಲಿ, ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಇದು ಪ್ರಾಯೋಗಿಕವಾಗಿ ಪ್ರಾರಂಭವಾಗಿ ಅನೇಕ ಕಷ್ಟಗಳನ್ನು ರೈತರು ಎದುರಿಸುತ್ತಿರುವುದನ್ನು ಈಗಾಗಲೇ ಮಾನ್ಯ ಬೈರೇಗೌಡರು ಪ್ರಸ್ತಾಪ ಮಾಡಿದ್ದು ಅದರ ವಿವರಣೆಗೆ ನಾನು ಹೋಗುವುದಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಪೂರ್ಣ ಮಾಹಿತಿಗಳನ್ನು ಸದನಕ್ಕೆ ಕೊಡಬೇಕು. ಯೋಜನ ನಿರ್ವಹಣಾ ಸಮಿತಿಯು ಏನಿದೆ, ಅದರ ಕೆಲಸ ಏನು? ಇದರಲ್ಲಿ ಯಾವ ರೈತ ಪ್ರತಿನಿಧಿಗಳನ್ನೂ ತೊಡಗಿಸಿಕೊಂಡಿಲ್ಲ. ಇದರಲ್ಲಿ ಸರಕಾರದವರು ನೇಮಕ ಮಾಡಿಕೊಂಡ ವಿವಿಧ ಇಲಾಖೆಗಳ ಅಧಿಕಾರಿ ವರ್ಗದವರು ಇದ್ದಾರೆ. ಹಾಗಾಗಿ ಈ ಯೋಜನ ನಿರ್ವಹಣಾ ಸಮಿತಿಯ ವ್ಯಾಪ್ತಿ ಏನು? ಈ ಸಮಿತಿಯಲ್ಲಿ ರೈತರ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಲು ಇರುವ ಕಷ್ಟವಾದರೂ ಏನು? ಯಾಕೆಂದರೆ ಇಲ್ಲಿ ಬೆಲೆ ನಿರ್ಧರಣಾ ಸಮಿತಿಯ ರಚನೆ ವಿಚಾರ ಇದೆ. ಬೆಲೆ ನಿರ್ಧರಣಾ ಸಮಿತಿಯ ರಚನೆಯಲ್ಲಿ ರೈತರ ಪ್ರತಿನಿಧಿಗಳನ್ನು ಸೇರಿಸಿಕೊಂಡಿದ್ದಾರೆ, ಆದರೆ ನಿರ್ವಹಣಾ ಸಮಿತಿಯಲ್ಲಿ ರೈತಪ್ರತಿನಿಧಿಗಳನ್ನು ಸೇರಿಸಿಕೊಂಡಿಲ್ಲ. ಹೀಗೆ ಇವರನ್ನು ಸೇರಿಸಿಕೊಳ್ಳುವ ಅವಶ್ಯಕತೆಯು ಇದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಅಂತೆಯೇ ಇದರ ವ್ಯಾಪ್ತಿಯ ಕುರಿತು ಕೂಡ ಮಾನ್ಯ ಸಚಿವರು ಸ್ಪಷ್ಟನೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಅಂತೆಯೇ ಆರ್ಥಿಕ ಜ್ಞಾಪನ ಪತ್ರದಲ್ಲಿ ಯಾವುದೇ ವಿಧವಾದ ಹೊರೆಯನ್ನು ಹೊರುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಸಮಗ್ರ ವೆಚ್ಚವನ್ನು ಎಣ್ಣೆ ತಾಳೆ ಯೋಜನೆ ನಿಧಿಯಿಂದ ಭರಿಸಲಾಗುವುದು ಎಂದು ಇದೆ. ಹಾಗಾದರೆ ಇದರಿಂದಲಾದರೂ ಎಷ್ಟನ್ನು ಭರಿಸಬೇಕಾದಂಥ ಸಂದರ್ಭ ಬರುತ್ತದೆ? ಅದನ್ನಾದರೂ ಸ್ಪಷ್ಟಪಡಿಸಬೇಕಾಗುತ್ತದೆ. ಸರಕಾರದಿಂದ ನೇರವಾಗಿ ಭರಿಸುವುದಕ್ಕೆ ಆಗದ ಸಂದರ್ಭ ಬರಬಹುದು. ತಾಳೆ ಎಣ್ಣೆ ಯೋಜನಾ ನಿಧಿಯಿಂದ ಎಷ್ಟನ್ನು ಅವರು ಒದಗಿಸುವಂಥ ಸಂದರ್ಭ ಒದಗಿ ಬರುತ್ತದೆ? ಎಂಬುದನ್ನು ಮಾನ್ಯ ಸಚಿವರು ವಿವರವಾದ ಮಾಹಿತಿಗಳನ್ನು ನೀಡುವುದರ ಮೂಲಕ ಕೊಡಬೇಕೆಂದು ಕೇಳ ಬಯಸುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈ ಮಸೂದೆಯನ್ನು ಸಭೆಯ ಮುಂದೆ ತಂದಿದ್ದಾರೆ. ಮಾನ್ಯ ಸದಸ್ಯರಾದ ಹೆಗಡೆಯವರು ಹೇಳಿದಹಾಗೆ, ಇದರಲ್ಲಿ ಯೋಜನಾ ನಿರ್ವಹಣಾ ಸಮಿತಿಯಲ್ಲಿ ರೈತರನ್ನು ತೆಗೆದುಕೊಂಡಿಲ್ಲ. ಬೆಲೆ ನಿರ್ಧರಣಾ ಸಮಿತಿಯಲ್ಲಿ ರೈತರನ್ನು ತೆಗೆದುಕೊಂಡಿದ್ದೀರಿ. ಆದ್ದರಿಂದ ಯೋಜನಾ ನಿರ್ವಹಣಾ ಸಮಿತಿಯಲ್ಲಿ

ರೈತರನ್ನು ತೆಗೆದುಕೊಳ್ಳಬೇಕು. ಎಣ್ಣೆ ಬೆಳೆಗಾರರ ಸಹಕಾರ ಸಂಘ ಎಂದು ಹೆಸರನ್ನು ಸೇರಿಸಿಕೊಂಡಿದ್ದೀರಿ. ನಿಮ್ಮ ಈ ಎರಡೂ ಸಮಿತಿಗಳಲ್ಲಿ ಸಹಕಾರ ಸಂಘದ ಯಾವ ಅಧಿಕಾರಿಗಳೂ ಇಲ್ಲ. ಕಾರ್ಯದರ್ಶಿ ಅಥವಾ ರಿಜಿಸ್ಟ್ರಾರ್‌ರವರನ್ನು ಇದರಲ್ಲಿ ಸೇರಿಸಿಕೊಳ್ಳಬೇಕಾಗುತ್ತದೆ. ಯಾಕೆಂದರೆ ಇದು ಬಹಳ ಮಹತ್ವವುಳ್ಳದ್ದಾಗಿದೆ. ನಾಳೆ ರೈತರುಗಳಿಗೆ ಸಹಾಯ ಮಾಡಬೇಕೆಂದರೆ ಸಹಕಾರ ಸಂಘಗಳ ಮೂಲಕವೇ ಮಾಡಬೇಕಾಗುತ್ತದೆ. ಅಲ್ಲಿ ಸಹಕಾರ ಇಲಾಖೆಯ ಕಾರ್ಯದರ್ಶಿಯವರ ಹೆಸರೇ ಇಲ್ಲ. ದಯವಿಟ್ಟು ಅದನ್ನು ಸೇರಿಸಿಕೊಳ್ಳಬೇಕು. ಆ ಮೇಲೆ ಕೃಷಿ ಮತ್ತು ತೋಟಗಾರಿಕಾ ಇಲಾಖಾ ಕಾರ್ಯದರ್ಶಿಯವರೇ ಅದಕ್ಕೆ ಅಧ್ಯಕ್ಷರಾಗಿ ಏಕೆ ಆಗಬೇಕು? ಸರಕಾರದವರು ಮನಸ್ಸು ಮಾಡಿದರೆ ತಜ್ಞರುಗಳನ್ನು, ಮತ್ತಿತರ ಅನುಭವಸ್ಥರನ್ನು ಅಧ್ಯಕ್ಷರನ್ನಾಗಿ ಮಾಡಬಹುದು. ಆ ಅಧಿಕಾರವನ್ನು ಸರಕಾರದವರೇ ಇಟ್ಟುಕೊಳ್ಳಬೇಕು. ಇಲಾಖಾ ಕಾರ್ಯದರ್ಶಿಯನ್ನೆ ಅಧ್ಯಕ್ಷರನ್ನಾಗಿ ಮಾಡಿ. ಆದರೆ ನೇಮಕ ಮಾಡುವಂಥ ಅಧಿಕಾರವನ್ನು ಸರಕಾರ ಇಟ್ಟುಕೊಳ್ಳಬೇಕು. ಆದ್ದರಿಂದ ಈ ವಿಚಾರಗಳ ಬಗ್ಗೆ ಗಮನಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದಂಥ ಮಾನ್ಯ ಭೈರೇಗೌಡರು ನನಗೆ ತಿಳಿದ ಮಟ್ಟಿಗೆ ಈ ಸದನದಲ್ಲಿ ನಾನು ಕೊಟ್ಟಿರುವ ವಿವರಗಳಿಗಿಂತ ಹೆಚ್ಚಿನ ವಿವರಗಳನ್ನು ತಮ್ಮ ಅನುಭವದ ಮೂಲಕ ಈ ಸದನಕ್ಕೆ ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಮಾನ್ಯರು ಈಗಾಗಲೇ ಹೇಳಿದಂತೆ ರಾಜ್ಯಕ್ಕೆ ಮೊಟ್ಟಮೊದಲನೇ ಬಾರಿ ಈ ಬೆಳೆಯು ಬಂದಿದೆ. ಮೊಟ್ಟಮೊದಲನೆ ಬಾರಿಗೆ ಈ ವಿಧೇಯಕವನ್ನು ಕೂಡ ತಂದಿದ್ದೇವೆ. ಇದು ಎಷ್ಟುಮಟ್ಟಿಗೆ ಲಾಭದಾಯಕವಾಗುತ್ತದೆ ಮತ್ತು ಅದಕ್ಕೆ ಏನೇನು ತಿದ್ದುಪಡಿಗಳು ಬೇಕಾಗಬಹುದು ಎಂಬುದನ್ನು ಲಕ್ಷ್ಯದಲ್ಲಿರಿಸಿಕೊಂಡು ಸ್ವಾಗತ ಮಾಡುತ್ತಾ ಈಗ ಏನು ನಮ್ಮ ಸದಸ್ಯರಾದ ಹೆಗಡೆಯವರು ಸಲಹೆಯನ್ನು ಕೊಟ್ಟಿದ್ದಾರೆ, ಅದರಂತೆ ಸಮಿತಿಗಳಲ್ಲಿ ರೈತರ ಪ್ರತಿನಿಧಿಗಳು ಇರಬೇಕೆಂದು ಹೇಳಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಇದರ ಮೂಲಭೂತವಾದ ಉದ್ದೇಶ ರೈತರ ಹಿತರಕ್ಷಣೆಯಾಗಿದೆ. ಇಲ್ಲಿ ಅಧಿಕಾರಿಗಳ ಹಿತರಕ್ಷಣೆ ವಿಚಾರ ಇಲ್ಲ. ಅವರು ಕೂಡ ಕಮಿಟಿಗಳಲ್ಲಿ ಇರಬೇಕು. ಒಂದು ಇಂಪಾರ್ಟಿಯಲ್ ಕಮಿಟಿ ಇರಬೇಕೆಂಬ ಉದ್ದೇಶದಿಂದ ಇದನ್ನು ತಂದಿದ್ದೇವೆ. ಈ ಬೆಳೆಯು ಕೃಷಿ ಮತ್ತು ತೋಟಗಾರಿಕೆ ಇಲಾಖೆಯಡಿ ಬರುವುದರಿಂದ, ಈ ಸಂಬಂಧವಾದ ಕಾರ್ಯಕ್ರಮಗಳು ತೋಟಗಾರಿಕೆ ಇಲಾಖೆಗೆ ಬರುವುದರಿಂದ ಇಲಾಖಾ ಕಾರ್ಯದರ್ಶಿಯವರನ್ನು ಚೇರ್ಮನ್ ಮಾಡಿದ್ದೇವೆಯೇ ಹೊರತು, ರೈತರನ್ನು ಹೊರಗಿಡಬೇಕೆಂಬ ಉದ್ದೇಶದಿಂದ ಅಲ್ಲ. ರೈತರನ್ನು ಅದರಲ್ಲಿ ಸೇರಿಸಬೇಕಾದಲ್ಲಿ ಆ ಕುರಿತು ಮಸೂದೆಯಲ್ಲಿ ಸೂಕ್ತ ಅವಕಾಶವನ್ನು ಮಾಡಿಕೊಡಲು ಸರಕಾರವು ಅದನ್ನು ಗಮನಿಸುತ್ತದೆ ಎಂಬ ವಿಚಾರವನ್ನು ತಮ್ಮ ಮುಂದಿಡುತ್ತೇನೆ. ಇವೊತ್ತು ಕೇವಲ ಕೇಂದ್ರ ಸರಕಾರದವರು ಮಾತ್ರ ಈ ಬೆಳೆಗೆ ಸ್ವಲ್ಪ ಸಬ್ಸಿಡಿಯನ್ನು ಕೊಡುತ್ತಿದ್ದಾರೆ. ಈ ಬೆಳೆ ಪ್ರಾರಂಭದಿಂದ ನಾಲ್ಕು ವರ್ಷಗಳವರೆಗೆ ಮೊದಲನೇ ವರ್ಷ 3000-4000, ಎರಡನೇ ವರ್ಷ ಖರ್ಚು ಕಡಿಮೆ ಬರುತ್ತದೆ ಅದು 2000, ಅಥವಾ 3000. ಹೀಗೆ ಒಟ್ಟಾರೆ 12500 ರೂಪಾಯಿಗಳನ್ನು ನಾಲ್ಕು ವರ್ಷಗಳ ಕಾಲದಲ್ಲಿ ಒಂದು ಹೆಕ್ಟೇರ್‌ಗೆ ಕೊಡತಕ್ಕಂಥ ಯೋಜನೆಯು ಕೇಂದ್ರ ಸರಕಾರದವರದ್ದಿತ್ತು. ಈ

ವರ್ಷದಿಂದ ಅದನ್ನು 15 ಸಾವಿರ ರೂಪಾಯಿಗಳಿಗೆ ಏರಿಸಿದ್ದಾರೆ. ಆದೇ ರೀತಿಯಲ್ಲಿ ಯಾರಾದರೂ ಈ ಉದ್ದೇಶಕ್ಕೋಸ್ಕರ ಡೀಸೆಲ್ ಜನರೇಟರ್ ಉಪಯೋಗ ಮಾಡುವುದಾದರೆ ಸಬ್ಸಿಡಿ ಕೊಡುವಂಥ ಯೋಜನೆಯನ್ನು ಕೇಂದ್ರ ಸರಕಾರದವರು ತಂದಿದ್ದಾರೆ.

ರಾಜ್ಯ ಸರ್ಕಾರದಿಂದ ಯಾವ ತರಹದ ಸಹಾಯಾರ್ಥ ಇದಕ್ಕೆ ಇಲ್ಲ. ಆದರೆ ಮೊಟ್ಟಮೊದಲಬಾರಿಗೆ, ಈಗಾಗಲೇ ಭೈರೇಗೌಡರು ಹೇಳಿದಂತೆ ಕೇಂದ್ರ ಸರ್ಕಾರದ ನೀತಿಯಿಂದ ನಮ್ಮದೇಶದಲ್ಲಿ ಬಹಳಷ್ಟು ಎಣ್ಣೆ ಖರೀದಿ ಮಾಡಿ ಖಾದ್ಯತೈಲಗಳ ಬೆಲೆ ಬಹಳ ಕಡಿಮೆಯಾಗಿದೆ. ಶೇಂಗಾ, ಸೋಯಾಬೀನ್, ಸೂರ್ಯಕಾಂತಿ ಯಾವುದೇ ಆಗಿರಲಿ ಬಹಳಷ್ಟು ಕಡಿಮೆಯಾಗಿದೆ. ಇವತ್ತು ಮಲೇಷ್ಯದಿಂದ ಎಣ್ಣೆ ತರಿಸುತ್ತಿದ್ದೇವೆ. ಮಲೇಷ್ಯದಲ್ಲಿ ಏನಾಗಿದೆ ಅಂದರೆ ವರ್ಷಕ್ಕೆ 10-11 ತಿಂಗಳು ಮಳೆ ಬರುತ್ತದೆ. ಅಲ್ಲಿ ಲಕ್ಷಾಂತರ ಎಕರೆಯೇನು ವೇಸ್ಟ್‌ಲ್ಯಾಂಡ್ ಇದೆ ಅದರಲ್ಲಿ ತಾಳೆಬೆಳೆ ಮಾಡಿ ಪ್ರಪಂಚದಲ್ಲೇ ಹೈಯೆಸ್ಟ್-ಯೀಲ್ಡ್ ಬರುವುದರಿಂದ ಉತ್ಪಾದನಾ ವೆಚ್ಚವೂ ಬಹಳ ಕಡಿಮೆಯಾಗಿದೆ. ಇದರಿಂದ ನಾವು ಬೆಳೆಯುವ ಅರ್ಧ ಬೆಲೆಗೆ ಅವರು ನಮ್ಮ ದೇಶಕ್ಕೆ ಸರಬರಾಜು ಮಾಡುತ್ತಿದ್ದಾರೆ. 115 ಪರ್ಸೆಂಟ್ ಇಂಪೋರ್ಟ್ ಡ್ಯೂಟಿ ಇದ್ದುದನ್ನು ಕಾಲಕ್ರಮೇಣ ಕೇಂದ್ರಸರ್ಕಾರ ಕಡಿಮೆ ಮಾಡಿ-ಮಾಡಿ 15 ಪರ್ಸೆಂಟಿಗೆ ಇಳಿಸಿ ಮಲೇಷ್ಯದಿಂದ ಬಹಳ ಚೀಪಾಗಿ ತಂದು ನಮ್ಮ ರೈತರಿಗೆ ಬಹಳ ಅನ್ಯಾಯ ಮಾಡಿದ್ದಾರೆ. ಅದರ ಬಗ್ಗೆ ಮಾನ್ಯ ಭೈರೇಗೌಡರು ಬಹಳ ವಿವರಣೆ ಕೊಟ್ಟಿದ್ದಾರೆ. ಕೇಂದ್ರದ ನೀತಿಯಿಂದ ಕರ್ನಾಟಕವಷ್ಟೇ ಅಲ್ಲ ಭರತಖಂಡದ ರೈತರಿಗೇ ಬಹಳ ಅನ್ಯಾಯವಾಗಿದೆ. ತಾವು ಬೆಳೆದ ಪದಾರ್ಥಗಳಿಗೆ ಹೆಚ್ಚಿನ ರೇಟು ಸಿಗುವೊಲ್ಲದು ಇವತ್ತು. ಯಾಕೆಂದರೆ ಪರದೇಶದ ಎಣ್ಣೆ ಬಹಳ ಸುಲಭ ರೇಟಿನಲ್ಲಿ ಸಿಗುತ್ತದೆ. ಈ ಪಾಲಿಸಿ ಬಗ್ಗೆ ನಾವು ಆಲೋಚನೆ ಮಾಡಬೇಕಾಗಿದೆ. ಈ ಆಕ್ಟ್ ಏನು ತರುತ್ತಿದ್ದೇವೆ ರೈತರ ಹಿತರಕ್ಷಣೆಯಿಂದ ತರುತ್ತಿದ್ದೇವೆ. ರೈತರು ಉತ್ಪಾದಕರಿಗೆ ನ್ಯಾಯ ಮಾಡಬೇಕೆಂಬ ಒಂದೇ ಉದ್ದೇಶದಿಂದ ತರುತ್ತಿದ್ದೇವೆ. ಇದರಲ್ಲೇನಾದರೂ ಸಣ್ಣಪುಟ್ಟ ಸಲಹೆಗಳಿದ್ದರೆ ಅವನ್ನು ನಾವು ಅಳವಡಿಸಿಕೊಳ್ಳುತ್ತೇವೆಂದು ಸದನಕ್ಕೆ ತಿಳಿಸಬಯಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್(ಮುಂಡಗಿ) : ಸಹಕಾರ ಇಲಾಖೆ ಕಾರ್ಯದರ್ಶಿಯನ್ನೂ ಹಾಕಿಕೊಳ್ಳಿರಿ ಅಂತ ಹೇಳಿದೆ. ನಾಳೆ ಪ್ರತಿಯೊಂದಕ್ಕೂ ಸಹಕಾರ ಬೇಕಾಗುತ್ತದೆ, ಸಾಲ ಕೊಡಲಿಕ್ಕೆ, ಮಾರಾಟ ಮಾಡಲಿಕ್ಕೆ ಮತ್ತೊಂದಕ್ಕೆ ಬೇಕಾಗುತ್ತದೆ.

ಶ್ರೀ ಅಲ್ಲಂ ವೀರಭದ್ರಪ್ಪ : ಇನ್ನೂ ಕೂಸು ಹುಟ್ಟಿದೆ.

ಉಪಾಧ್ಯಕ್ಷರು : 2000ದ ಕರ್ನಾಟಕ ಎಣ್ಣೆ ತಾಳೆ (ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣದ ವಿನಿಯಮ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 23 ರವರೆಗೆ

ಉಪಾಧ್ಯಕ್ಷರು : ಖಂಡ 2 ರಿಂದ 23ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(2 ರಿಂದ 23ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 'ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸಿರುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ಸಚಿವರು) : ಮಾನ್ಯ ಉಪಾಧ್ಯಕ್ಷರೇ 2000ದ ಕರ್ನಾಟಕ ಎಣ್ಣೆ ತಾಳೆ (ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣದ ವಿನಿಯಮ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ ಕರ್ನಾಟಕ ಎಣ್ಣೆ ತಾಳೆ (ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣದ ಅಧಿನಿಯಮ) ವಿಧೇಯಕ 2000 ಅನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಆ) ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕ, 2000.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಚ್. ಸಿ. ಶ್ರೀಕಂಠಯ್ಯ (ಮಾನ್ಯ ಕಂದಾಯ ಸಚಿವರು) : ಉಪಾಧ್ಯಕ್ಷರೇ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕ, 2000 ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.